# “ಶ್ರೀಪದ್ಮನಾಭತೀರ್ಥರ ಬಗ್ಯೆ ಕೀರ್ತನೆ”

ಗುರುವರ್ಯ ಶ್ರೀಪದ್ಮನಾಭತೀರ್ಥರ ದಿವ್ಯ
ಚರಣ ಪದ್ಮಗಳಲ್ಲಿ ಶರಣಾದೆ ಸತತ ।
ಸುರನಿಕರ ಶಿವ ಮಧ್ವ ವಿಧಿನುತ ಪಾದಾಂಬುಜ
ಶ್ರೀಕರಾರ್ಚಿತ ಪದ್ಮನಾಭನಿಗೆ ಪ್ರಿಯ । ಪ ।

ಅಶೇಷ ಗುಣಗಣಾಧಾರ ಶ್ರೀಪತಿ ಅನಘ
ಹಂಸ ಪರಮಾತ್ಮನೇ ಮೂಲ ಗುರು ಆಗುರು ।
ಹಂಸ ಬೋಧಿತ ವಿಧಿ ಸನಕಾದಿ ಯೋಗಿವರ
ವಂಶಜಾಚ್ಯುತಪ್ರೇಕ್ಷ ಸರ್ವರಿಗೂ ನಮಿಪೆ । ೧ ।

ಅಚ್ಯುತಪ್ರೇಕ್ಷಾಖ್ಯ ಪುರುಷೋತ್ತಮಚಾರ್ಯ ಕರ
ತೋಯಜೋದ್ಭವ ಆನಂದತೀರ್ಥರಿಗೆ ।
ಕಾಯವಾಙ್ಮನದಿಂದ ಶರಣಾದೆ ಸತತ
ತೋಯಜ ಭವಾಂಡದ ಸಜ್ಜನೋದ್ಧಾರ । ೨ ।

ಶ್ರೀವರ ಶ್ರೀವ್ಯಾಸನವತಾರಕನುಸರಿಸಿ
ಭಾವಿಬ್ರಹ್ಮನು ಮುಖ್ಯ ವಾಯುದೇವ ।
ದೇವೀ ಜಯಾ ಸಂಕರುಷಣಾತ್ಮಜನು ಈ
ಭುವಿಯಲಿ ತೋರಿಹನು ಹರಿಯ ಪ್ರಥಮಾಂಗ । ೩ ।

ಧೃತಿ ಪ್ರಭಂಜನ ವಾಯು ಸ್ಮರಭರತ ಗುರುವರನು
ಮಾತರಿಶ್ವನು ಸೂತ್ರಪವಮಾನ ಪ್ರಾಣ ।
ಮಧ್ವಮುನಿ ಆನಂದತೀರ್ಥರಾಗಿ ಬಂದ
ಮೇದಿನಿಯಲ್ಲಿ ಬ್ರಹ್ಮ ಧಾಮ । ೪ ।

ಬಲ ಜ್ಞಾನಾದಿಗಳಲ್ಲಿ ಹ್ರಾಸವಿಲ್ಲವು ಇವಗೆ
ಎಲ್ಲ ಅವತಾರಗಳೂ ಸಮವು ಅನ್ಯೂನ ।
ಶುಕ್ಲ ಶೋಣಿತ ಸಂಬಂದ ಇಲ್ಲವೇ ಇಲ್ಲ
ಇಳೆಯಲ್ಲಿ ಜನಿಸಿಹ ಹನುಮ ಭೀಮ ಮಧ್ವ । ೫ ।

ಮಧ್ವನ್ನ ಒಲಿಸಿಕೊಳ್ಳದೇ ಇರುವ ಜನರಿಗೆ
ಬಂದ ಭಯ ನಿವೃತ್ತಿಯು ಸದ್ಗತಿಯು ಇಲ್ಲ ।
ಮಾಧವ ಶ್ರೀಹರಿಯ ಪರಮ ಪ್ರಸಾದವು
ಮಧ್ವ ಒಲಿದರೆ ಉಂಟು ಅನ್ಯಥಾ ಇಲ್ಲ । ೬ ।

ಮಾಲೋಲ ಶ್ರೀರಾಮಕೃಷ್ಣ ಪ್ರೀತಿಗಾಗಿಯೇ
ಬಲಕಾರ್ಯ ಮಾಡಿದ ಹನುಮಂತ ಭೀಮ ।
ಕಲಿಯುಗದಿ ಈ ಭೀಮ ಅವತಾರ ಮಾಡಿಹನು
ಕಲಿಮಲಾಪಹ ಜಗದ್ಗುರು ಮಧ್ವನಾಗಿ । ೭ ।

ಮಣಿಮಂತ ಮೊದಲಾದ ಕಲಿಯ ಪರಿವರಗಳು
ಕ್ಷೋಣಿಯಲ್ಲಿ ಪುನರ್ಜನಿಸಿ ಕಲಿಯುಗದಲ್ಲಿ ।
ಆಮ್ನಾಯ ನಿಗಮತತಿ ಸತ್ತತ್ತ್ವ ವಿರುದ್ಧ
ಶೂನ್ಯ ಮಾಯಾವಾದಿಗಳು ಹರಡಿರಲು । ೮ ।

ಒಳ್ಳೆ ಜನರಂತೆ ನಟಿಸುತ್ತ ದುರ್ಮತಗಳ
ಇಳೆಯಲ್ಲಿ ಪ್ರಸರಿಸೆ ಸುಜನರ ಮನಸು ।
ಮೆಲ್ಲಮೆಲ್ಲನೆ ಹರಿ ತತ್ತ್ವವನು ಮರೆಯಲು
ಮಾಲೋಲ ಆಜ್ಞೆಯಿಂ ಜನಿಸಿದ ಮಧ್ವ । ೯ ।

ಮಧ್ವಗೇಹಾಚಾರ್ಯ ಪಂಡಿತರ ಮನೆಯಲ್ಲಿ
ನಿರ್ದೋಷ ರೀತಿಯಲ್ಲಿ ಜನಿಸಿ ಈ ಮಧ್ವ
ವೈದಿಕ ಸತ್ತತ್ವ ವಾದವನು ಸುಜನರಿಗೆ
ಭೋಧಿಸಿ ಅವರ ಹೃತ್ತಿಮಿರ ಕಳೆದ । ೧೦ ।

ಬದರಿಗೆ ಪೋಗಿ ಶ್ರೀವೇದವ್ಯಾಸನಕಂಡು
ವೇದವ್ಯಾಸಾಭಿಪ್ರಾಯದಲೆ ಮೂಲ
ಗ್ರಂಥ ಮೂವತ್ತೇಳ ಮಾಡಿ ಅಧಿಕಾರಿಗಳ
ಉದ್ಧಾರ ಮಾಡಿಹ ಕಾರುಣ್ಯ ಶರಧಿ । ೧೧ ।

ಆ ಸೇತು ಹಿಮಗಿರಿ ಬದರೀಕಾಶ್ರಮ ಕ್ಷೇತ್ರ
ವಸುಧೆಯ ಸಮಸ್ತ ಕಡೆ ಪೋಗಿ ಅಲ್ಲಲ್ಲಿ
ದುಸ್ತರ್ಕ ದುರ್ಮತ ಆಟವಿಗಳ ಛೇಧಿಸಿ
ಶ್ರೀಶನ್ನ ಒಲಿಸಿದ ಸುಜನವೃಂದಕ್ಕೆ । ೧೨ ।

ಈರೀತಿ ದಿಗ್ವಿಜಯ ಮಾಡಿ ಮಾರ್ಗದಲ್ಲಿ
ಭಾರೀ ಪಂಡಿತರುಗಳೂ ರಾಜಪ್ರಮುಖರೂ ।
ಪೌರ ಜನರುಗಳಿಂದ ಮರ್ಯಾದೆ ಕೊಳ್ಳುತ್ತ
ಸೇರಿದರು ಗೋದಾವರೀ ತೀರಕ್ಷೇತ್ರ । ೧೩ ।

ಶಿಷ್ಯರ ಸಹ ಮಧ್ವ ಮುನಿಗಳು ಬರುವುದು
ಆ ಕ್ಷೇತ್ರದಲ್ಲಿ ಪ್ರಖ್ಯಾತ ಪಂಡಿತರು ।
ಈಕ್ಷಿಸಿ ಮರ್ಯಾದೆಯಿಂದ ಸ್ವಾಗತಿವಿತ್ತು
ಅಪೇಕ್ಷಿಸಿದರು ತತ್ತ್ವವಾದ ನಿರ್ಣಯಗಳ । ೧೪ ।

ಆನಂದತೀರ್ಥ ಮಧ್ವಾಚಾರ್ಯ ರಚಿಸಿದ್ದ
ಆನಂದಪ್ರದ ಬ್ರಹ್ಮಸೂತ್ರ ಭಾಷ್ಯವನು ।
ದಿನವೂ ಸತ್ಯತೀರ್ಥರು ಪ್ರತಿಗಳ ಮಾಡಿದರು
ಘನ ಬಕುತಿಯಲಿ ಬದರಿಯಿಂದ ಬರುವಾಗ । ೧೫ ।

ಹಿಂದೆ ಕುಮತಿಗಳು ಮಾಡಿದ ಕುಭಾಷ್ಯಗಳು
ಒಂದು ಮೇಲಿಪ್ಪತ್ತು ಖಂಡಿಸಿ ವೈಧಿಕ
ಸಿದ್ಧಾಂತ ಸ್ಥಾಪಿಪ ಮಧ್ವ ಭಾಷ್ಯವ ಕುರಿತು
ಮಂದಿಗಳು ಅಲ್ಲಲ್ಲಿ ಕೇಳಿಯೇ ಇದ್ದರು । ೧೬ ।

ವಾದಿಸಿಂಹನು ಬುದ್ದಿಸಾಗರನು ಇಂಥವರು
ಎದುರು ನಿಲ್ಲಲು ಶಕ್ಯವಿಲ್ಲದೆ ಓಡಿದ್ದು ।
ಮೊದಲೇನೇ ಕೇಳಿದ್ದ ಆ ಪಂಡಿತರು
ಮಧ್ವಾಚಾರ್ಯರೊಡನೆ ವಾದಿಸೆ ನಿಂತರು । ೧೭ ।

ಬೌದ್ಧಚಾರ್ವಾಕ ಪ್ರಭಾಕರ ಭಟ್ಟರು
ಬುದ್ಧಿತೀಕ್ಷ್ಣರು ನೈಯಾಯಿಕರು ವೈಶೇಷಿಕರು ।
ವಾದೀಭಕೇಸರಿ ಮಧ್ವರಾಜರ ಮುಂದೆ
ಬಿದ್ದರು ಸೋತು ನಿರುತ್ತರರಾಗಿ । ೧೮ ।

ಅದ್ವೈತ ವಾದಿಗಳೊಳು ಪ್ರಖ್ಯಾತ ಪ್ರವರ
ವಿದ್ವಚ್ಛಿರೋಮಣಿ ಶೋಭನಭಟ್ಟ ।
ಮಧ್ವಾಚಾರ್ಯರೊಡನೆ ವಾದಿಸಲು ನಿಂತರು
ಅಧ್ಯಕ್ಷ ಮಧ್ಯಸ್ಥ ಸಭೆ ಕೂಡಿಸಿದರು । ೧೯ ।

ವೈದಿಕ ಎಂದೆನಿಪ ಮತಗಳ ಶಾಖೆಗಳು
ಹದಿನೆಂಟು ಪ್ರತಿನಿಧಿ ವಿದ್ವದ್ ರತ್ನಗಳು
ಬಂದು ತುಂಬಿದರು ಈ ದೊಡ್ಡ ಸಭೆಯಲ್ಲಿ
ಅದ್ವೈತ ದ್ವೈತ ವಾದಗಳ ಕೇಳಲಿಕೆ । ೨೦ ।

ಗೋದಾವರೀ ಸರೀಚ್ಛ್ರೇಷ್ಟತೀರಸ್ಥ
ಉದ್ದಾಮ ಪಂಡಿತಾಗ್ರಣಿ ಶೋಭನರು ।
ವಾದಿಸುವ ವೈಖರಿ ನೋಡಲು ಬಹುಮಂದಿ
ವಿದ್ವಜ್ಜನರಿಂದ ತುಂಬಿತು ಸಭೆಯು । ೨೧ ।

ಅದ್ವೈತವಾದದ ಪ್ರಕ್ರಿಯಾ ಸೂಕ್ಷ್ಮಗಳ
ಮುಂದಿಟ್ಟು ಶೋಭನರು ವಾದಮಾಡಿದ್ದು
ಮಧ್ವರ ಪ್ರಾಮಾಣಿಕ ಶೃತಿಯುಕ್ತಿಯುತವಾದ
ವಾಗ್ಧಾರಾ ರಭಸದಲಿ ಬಿದ್ದಿತು ಸೋತು । ೨೨ ।

ಖೇದವಾಗಲೇ ಇಲ್ಲ ತನ್ನ ಸೋಲಿಂದ
ಮೋದವಾಯಿತು ಮನಕೆ ತತ್ತ್ವನಿರ್ಣಯದಿ।
ವೈದಿಕವು ಮಧ್ವ ಮತವೇವೆ ನಿಜಸುಖ ಪ್ರದವು
ಎಂದು ಭಟ್ಟರು ಮಾಯಿ ಮತವ ತ್ಯಜಿಸಿದರು । ೨೩ ।

ಹಿಂದೆ ತ್ರಿವಿಕ್ರಮಾಚಾರ್ಯರಿಗಾದಂತೆ
ಇಂದು ಶೋಭನಭಟ್ಟ ಮಧ್ವಮುನಿಯಿಂದ
ಸತ್ತತ್ತ್ವ ನಿರ್ಣಯಹೊಂದಿ ಸನ್ನಮಿಸಿ
ಸದ್ವೈಷ್ಣವ ದೀಕ್ಷೆ ಅನುಗ್ರಹ ಬೇಡಿದರು । ೨೪ ।

ಬಹು ಸಂಖ್ಯಾತ ಮಾಯಿಗಳು ಭಟ್ಟರಿಗೆ
ಐಹಿಕ ಧನದ್ರವ್ಯ ಪೂಜೆ ಮರ್ಯಾದೆ ।
ಅಹರಹ ಒಲಗಿಸುವರನ್ನು ಸಂತ್ಯಜಿಸಿ
ಮಹಾಪುರುಷೋತ್ತಮದಾಸರ ಸೇರಿದರು । ೨೫ ।

ಮಹಾಪುರುಷೋತ್ತಮದಾಸರು ಮಧ್ವಮುನಿ
ಮಹಾ ವೈರಾಗ್ಯಯುತ ಭಕ್ತಿಮಾನ್ ಭಟ್ಟಗೆ
ಅಹಿಶಾಯಿ ವನರುಹ ನಾಭನ್ನ ಒಲಿಸಿ
ಬಹು ವೈಭವದಿಂದ ಇತ್ತರು ಸಂನ್ಯಾಸ । ೨೬ ।

ಈ ಪುಣ್ಯಶ್ಲೋಕ ಶೋಭನ ಭಟ್ಟ ಆರ್ಯರಿಗೆ
ಶ್ರೀಪದ್ಮನಾಭತೀರ್ಥರು ಎಂಬ ನಾಮ ।
ಶ್ರೀ ಪೂರ್ಣಪ್ರಜ್ಞ ಮಧ್ವಾಚಾರ್ಯರು ಇತ್ತು
ಉಪದೇಶ ಮಾಡಿದರು ಪ್ರಣವಾದಿ ಮಂತ್ರ । ೨೭ ।

ಗೋಪೀವಲ್ಲಭ ವಿಠ್ಠಲನ್ನ ಪೂಜಿಸಲು
ಗೋಪೀವಲ್ಲಭ ವಿಠ್ಠಲ ಪ್ರತಿಮೆಯನ್ನ ।
ಶ್ರೀಪೂರ್ಣಪ್ರಜ್ಞರು ಈ ಹೊಸಾ ಯತಿಗೆ
ಕೃಪೆ ಮಾಡಿ ಇತ್ತರು ವಾತ್ಸಲ್ಯದಿಂದ । ೨೮ ।

ಆನಮಿಪಿ ಶ್ರೀಗೋಪೀನಾಥ ವಿಠ್ಠಲನ
ಜ್ಞಾನ ಆನಂದಮಯ ಪಾದಯುಗ್ಮಕ್ಕೆ
ಪೂರ್ಣಜ್ಞಾನಾತ್ಮನು ಪೂರ್ಣ ಐಶ್ವರ್ಯಾತ್ಮ
ಪೂರ್ಣ ಪ್ರಭಾನಂದ ತೇಜಸ್ಯಕ್ತ್ಯಾತ್ಮ । ೨೯ ।

ಮಧ್ವರಾಯರು ಉಡುಪಿ ಕೃಷ್ಣನ್ನ ಪೂಜಿಸಲು
ಯತಿಮಠ ಎಂಟರ ನೇಮಿಸಿ ತಮ್ಮ ।
ಆದಿಮಠ ಆಡಳಿತ ಪದ್ಮನಾಭರಿಗಿತ್ತು
ಬದರಿಗೆ ಪೋದರು ಶ್ರೀಶ ವ್ಯಾಸನಲಿ । ೩೦ ।

ವೇದಾಂತ ಸಾಮ್ರಾಜ್ಯಪೀಠವನ್ನೇರಿ
ಪದ್ಮನಾಭತೀರ್ಥರು ತಮ್ಮಯ ಶಿಷ್ಯ ।
ಯತಿವರ್ಯ ಲಕ್ಷ್ಮೀಧರತೀರ್ಥರಿಗೆ
ಇತ್ತರು ಶ್ರೀಗೋಪೀನಾಥವಿಠಲನ್ನ । ೩೧ ।

ಶ್ರೀಪದ್ಮನಾಭತೀರ್ಥರ ಲಕ್ಷ್ಮೀಧರರ ।
ಸುಪುಣ್ಯಸಂತತಿಗೆ ನಮೋ ನಮೋ ಎಂಬೆ ।
ಶ್ರೀಪಾದರಾಜ ಲಕ್ಷ್ಮೀನಾರಾಯಣ
ಕೃಪಾನಿಧಿ ಪ್ರಖ್ಯಾತರೀ ವಂಶದವರು । ೩೨ ।

ಗೋದಾವರೀ ಎಂಬ ಸರಿದ್ವರ ದೇವಿಗೆ
ಸದಾ ನಮೋ ಪಾಪಹರೇ ಸಂಪತ್ಪ್ರದಾತೆ ।
ಸಾಧು ಜನ ಸುಪ್ರಿತೆ ಶೋಭನ ಭಟ್ಟರ
ವರ್ಧಿಸಿಹಳು ಪೋಷಿಸಿ ತನ್ನ ತೀರದಿ । ೩೩ ।

ಬ್ರಹ್ಮಾನುಗ್ರಹಿ ಪದ್ಮನಾಭತೀರ್ಥರು
ಶ್ರೀಮಧ್ವರಾಯರ ಪೀಳಿಗೆಯೊಳ್ ಪ್ರವರ ।
ಈ ಮಹಾವೇದಾಂತ ಚಕ್ರವರ್ತಿಗೆ ಪರಾಕ್
ಎಮಗೆ ವಿಜ್ಞಾನಾದಿ ಧನವ ವೀವರಿಗೆ । ೩೪ ।

ವನರುಹನಾಭ ವಿರಚಿತ ಗ್ರಂಥಗಳಲ್ಲಿ
ಸನ್ನ್ಯಾಯ ರತ್ನಾವಳಿಯು ಪ್ರಖ್ಯಾತ ।
ಆನಂದತೀರ್ಥಮಠ ಆರು ವರ್ಷಗಳಾಳಿ
ಮುನಿ ನೃಹರಿತೀರ್ಥಗೆ ಇತ್ತರಾಡಳಿತ । ೩೫ ।

ತುಂಗಭದ್ರಾದಲ್ಲಿ ನವವೃಂದಾವನ ಕ್ಷೇತ್ರ
ತುಂಗಮಹಿಮರು ವೃಂದಾವನದಿ ಕುಳಿತಿಹರು ।
ಗಂಗಾಜನಕ ಪ್ರಿಯ ಜಗನ್ಮಾನ್ಯರಿವರ
ಅಂಘ್ರಿಪದ್ಮವ ನೆನೆಯೆ ಸೌಭಾಗ್ಯಲಾಭ । ೩೬ ।

ಸುರ ನಿಕರ ಶಿವ ಮಧ್ವ ವಿಧಿನುತ ಪದಾಂಭೋಜ
ಶ್ರೀಕರಾರ್ಚಿತ ಶ್ರೀಪ್ರಸನ್ನ ಶ್ರೀನಿವಾಸ
ಸರಸಿಜಾಸನ ಪಿತನಿಗೆ ಪ್ರಿಯ ಯತೀಂದ್ರರೇ
ಶಿರಿಪದ್ಮನಾಭತೀರ್ಥರೇ ಶರಣು ಪಾಹಿ । ೩೭ ।

ಇತಿ ಶ್ರೀ ಪ್ರಸನ್ನ ಶ್ರೀನಿವಾಸದಾಸರ ವಿರಚಿತ
ಪದ್ಮನಾಭತೀರ್ಥರ ಕೀರ್ತನ ಸಂಪೂರ್ಣಮ್ । ಕೃಷ್ಣಾರ್ಪಣಮಸ್ತು ।